ಉಪಗ್ರಹ ಆಧಾರಿತ ಮಾಹಿತಿಯ ಪ್ರಕಾರ, ಈ ಹಕ್ಕಿ ಎಲ್ಲಿಯೂ ನಿಲ್ಲದೇ ಹಾರಾಟ ನಡೆಸಿದೆ. 'ಬರ್ಡ್‌ಲೈಫ್ ತಾಸ್ಮೇನಿಯಾ' ಸಂಯೋಜನಾಧಿಕಾರಿ ಆಗಿರುವ ಪಕ್ಷಿತಜ್ಞ ಎರಿಕ್ ವ್ಹೂಲರ್ ತಿಳಿಸಿರುವ ಪ್ರಕಾರ, ಇಂತಹ ಹಾರಾಟ ಆಕಸ್ಮಿಕವೇ? ಅಥವಾ ಈ ಪ್ರಭೇದದ ನಿಯಮಿತ ವಲಸೆಯೇ? ಎಂಬುದು ಇನ್ನೂ ತಿಳಿಯಬೇಕಿದೆ. ಹಾಗೆಯೇ ಈಗ ಹಾರಿದ್ದ ಹಕ್ಕಿ ಒಂಟಿಯಾಗಿತ್ತೇ? ಅಥವಾ ಗುಂಪಿನಲ್ಲಿತ್ತೇ ಎಂಬ ಮಾಹಿತಿ ಇನ್ನೂ ಲಭ್ಯವಾಗಿಲ್ಲ. ಈ ಹಕ್ಕಿಯೊಂದಿಗೆ ಇನ್ನೂ ಕೆಲವು ಹಕ್ಕಿಗಳಿಗೆ ಗುರುತಿನ ಚೀಟಿ/ಸಂಖ್ಯೆ ನೀಡಲಾಗಿತ್ತು. ಅವುಗಳ ಮಾಹಿತಿ ಇನ್ನಷ್ಟೇ ಸಂಶೋಧನಾ ಲೇಖನದಲ್ಲಿ ಪ್ರಕಟಗೊಳ್ಳಬೇಕಿದೆ. ವಯಸ್ಕ ಹಕ್ಕಿಗಳು ಮರಿಗಳಿಗಿಂತ ಮೊದಲೇ ಅಲಾಸ್ಕದಿಂದ ಹೊರಡುತ್ತವೆ. ಹಾಗಾಗಿ, ಈ ಗುರುತಿನ ಹಕ್ಕಿ ತನ್ನ ಹಿರಿಯರನ್ನು ಅನುಸರಿಸಿ ಅವರ ಹಿಂದೆ ಹಾರಿರುವ ಸಾಧ್ಯತೆ ಕಡಿಮೆಯೆಂದು ವಿಜ್ಞಾನಿಗಳು ತಿಳಿಸಿದ್ದಾರೆ.

ಮರಳು ಪೀಪಿ (Sand piper) ಅಥವಾ ಗದ್ದೆಗೊರವಗಳ ಜಾತಿಗೆ ಸೇರಿದ ಪಟ್ಟೆ ಬಾಲದ ಹಿನ್ನೀರು ಗೊರವಗಳು ಉತ್ತರ ಧ್ರುವ ಪ್ರದೇಶದ ಅಲಾಸ್ಕ ಪ್ರಾಂತ್ಯದಲ್ಲಿ ಸಂತಾನಾಭಿವೃದ್ಧಿ ಮಾಡುವ ಹಕ್ಕಿಗಳು. ಜಗತ್ತಿನ ಅತೀ ದೂರದ ಪ್ರದೇಶಗಳಿಗೆ ವಲಸೆ ಹೋಗುವ ಹಕ್ಕಿಗಳಲ್ಲಿ ಪ್ರಮುಖವಾದವು. ಉತ್ತರ ಅಮೆರಿಕದ ಮೇಲ್ಭಾಗದ ಕೆನಡಾ ದೇಶದ ಪಕ್ಕದಲ್ಲಿ ಅಲಾಸ್ಕ ಪ್ರದೇಶ ಬರುತ್ತದೆ. ಚಳಿಗಾಲದಲ್ಲಿ ಇಲ್ಲಿ ತಾಪಮಾನ ಕಡಿಮೆಯಾಗಿ ನೀರು ಮಂಜುಗಡ್ಡೆಯಾದಾಗ, ಶೀತ ವಾತಾವರಣವನ್ನು ತಡೆಯಲು ಆಗದೇ ಇಲ್ಲಿರುವ ಹಕ್ಕಿಗಳು ಹೆಚ್ಚು ಉಷ್ಣ ಪ್ರದೇಶಗಳಿರುವ ದಕ್ಷಿಣ ಧ್ರುವದ ದೇಶಗಳಿಗೆ ವಲಸೆ ಹೋಗುತ್ತವೆ. ವಲಸೆ ಸಮಯದಲ್ಲಿ ಯೂರೋಪ್ ಮತ್ತು ಏಷ್ಯಾ ದೇಶಗಳಲ್ಲಿ ಕಾಣಿಸಿಕೊಳ್ಳುವ ಇವು, ಚಳಿಗಾಲದಲ್ಲಿ ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ದೇಶಗಳ ಕಡಲ ತೀರಗಳಿಗೆ ಬರುತ್ತವೆ.

## ಗುಣಲಕ್ಷಣಗಳು

ಸಾಮಾನ್ಯ ಕೋಳಿಯ ಗಾತ್ರವಿದ್ದು ಗರಿಷ್ಠ 46 ಸೆಂ.ಮೀ.ಗಳಷ್ಟು ಎತ್ತರ ಬೆಳೆಯಬಲ್ಲವು. ಚಳಿಗಾಲದಲ್ಲಿ ಮರಳುಮಿಶ್ರಿತ ಕಂದು ಬಣ್ಣವಿರುತ್ತವೆ. ಉದ್ದನೆಯ ಕಾಲುಗಳು ಮತ್ತು ಉದ್ದವಾದ, ಸ್ವಲ್ಪ ಬಾಗಿದ ಕೊಕ್ಕನ್ನು ಹೊಂದಿರುತ್ತವೆ.

ಸಂತಾನಾಭಿವೃದ್ಧಿ ಸಮಯದಲ್ಲಿ ಗಂಡಿನ ತಲೆ, ಕುತ್ತಿಗೆ, ದೇಹದ ಕೆಳಗಿನ ಭಾಗವೆಲ್ಲಾ ಕಡು ಕಂದು ಬಣ್ಣಕ್ಕೆ ತಿರುಗುತ್ತದೆ (ಚಿತ್ರ–5). ಹೆಣ್ಣು ಸ್ವಲ್ಪ ಪೇಲವ ಕಂದು ಬಣ್ಣದ್ದಾಗಿರುತ್ತದೆ. ಟಿ–ಟಿನ್ ಅಥವಾ ಚಿಟ್ಯೂ... ಚಿಟ್ಯೂ.... ಎಂದು ಕೂಗುತ್ತವೆ. ಆಹಾರಕ್ಕಾಗಿ ಸಮುದ್ರ ತೀರದಲ್ಲಿ ಸಿಗುವ ಅಕಶೇರುಗಳಾದ ಮೃದ್ವಂಗಿಗಳು, ಕಪ್ಪೆಚಿಪ್ಪು, ಕೀಟ ಮುಂತಾದವುಗಳನ್ನು ತಿನ್ನುತ್ತವೆ. ಉಪ್ಪಿನ ನೀರಿರುವ ತೀರಪ್ರದೇಶಗಳಲ್ಲಿ ಗುಂಪಿನಲ್ಲಿ ವಾಸಿಸುತ್ತವೆ. ಈ ಪ್ರಭೇದದಲ್ಲಿ ಎರಡು ತಳಿಗಳನ್ನು ಗುರುತಿಸಲಾಗಿದೆ. ಹೆಣ್ಣು ಮತ್ತು ಗಂಡು ಹುಟ್ಟಿದ 730 ದಿನಗಳಲ್ಲಿ (ಎರಡು ವರ್ಷಗಳು) ಪ್ರೌಢಾವಾಸ್ಥೆಗೆ ಬರುತ್ತವೆ. ವರ್ಷಕೊಮ್ಮೆ ಮಾತ್ರ ಸಂತಾನಾಭಿವೃದ್ಧಿ ಮಾಡುತ್ತವೆ. ಆಗ ನಾಲ್ಕು ಮೊಟ್ಟೆಗಳನ್ನಿಡುತ್ತವೆ. ಕಾವು ಕೊಡುವ ಅವಧಿ 21 ದಿನಗಳು. ಮೊಟ್ಟೆಯಿಂದ ಹೊರಬರುವ ಮರಿ ಕೇವಲ 28 ಗ್ರಾಂ ತೂಗುತ್ತದೆ. ವಯಸ್ಕ ಹಕ್ಕಿಯ ಸರಾಸರಿ ತೂಕ 320 ಗ್ರಾಂ. ಸರಾಸರಿ ಜೀವಿತಾವಧಿ ಐದು ವರ್ಷಗಳು. ಆದರೆ ಕೆಲವು ಹಕ್ಕಿಗಳು ಮೂವತ್ತು ವರ್ಷಗಳಿಗೂ ಹೆಚ್ಚು ಕಾಲ ಬದುಕಿರುವ ಉದಾಹರಣೆಗಳಿವೆ.

ಈ ಹಕ್ಕಿಗಳು ಸಂತಾನಾಭಿವೃದ್ಧಿ ಮಾಡುವ ದೇಶಗಳೆಂದರೆ – ಫಿನ್ಲೆಂಡ್, ನಾರ್ವೆ, ರಷ್ಯಾ, ಸ್ವೀಡನ್, ಮಂಗೋಲಿಯಾ ಮತ್ತು ಅಮೆರಿಕ. ಇವು ವಲಸೆಗಾಗಿ ತೆರಳುವ ದೇಶಗಳಲ್ಲಿ ಸ್ಪೇನ್, ಇಂಗ್ಲೆಂಡ್, ಇಟಲಿ, ಫ್ರಾನ್ಸ್, ಡೆನ್ಮಾರ್ಕ್, ಜರ್ಮನಿ, ಗ್ರೀಸ್, ದಕ್ಷಿಣ ಆಫ್ರಿಕಾ, ಭಾರತ, ಸೌದಿ ಅರೇಬಿಯಾ, ಸಿಂಗಪುರ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಸೇರಿವೆ.



ದಾವಣಗೆರೆಯಲ್ಲಿ ಕಾಣಸಿಕ್ಕ ಕಪ್ಪು ಬಾಲದ ಹಿನ್ನೀರು ಗೊರವ

